ಗಳು ಬೇಕಾಗುತ್ತವೆ. ಆಹಾರ ಪದಾರ್ಥಗಳಿಗೆ ೧.೨೦ ಲಕ್ಷ ಬೇಕಾಗುತ್ತದೆ. ಔಷಧಿ ಇತ್ಯಾದಿಗಳಿಗೆ ೨.೨೦ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಹೀಗೆ ಹೆಚ್ಚುವರಿ ಬೇಕಾಗುವ ಹಣದ ಖರ್ಚುಗಳನ್ನು ಲೆಕ್ಕ ಹಾಕಿ ನೋಡಿದರೆ ಇನ್ನೂ ೧೫ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಅದನ್ನು ಮುಂದಿನ ವರ್ಷದಲ್ಲಿ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಕ.ರಾ.ರ.ಸಾ. ಸಂಸ್ಥೆಯಿಂದ ಅಧಿಕ ವೆಚ್ಚ

೧೩೮೨. ಶ್ರೀ ಐ. ಬಿ. ಶಂಕರ್ (ಚಿಕ್ಕಮಂಗಳೂರು).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಷ್ಟ್ರೀಯ ಹೆದ್ದಾರಿಯಲ್ಲಿ ನಿರ್ಮಿಸಿರುವ ರಸ್ತೆ ದಿಬ್ಬಗಳಿಂದ ರಾಜ್ಯ ರಸ್ತೆ ಸಾರಿಗೆ ವಾಹನಗಳಲ್ಲಿ ಅಧಿಕ ಖರ್ಚು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಕೆ.ಎಸ್.ಆರ್.ಟಿ.ಸಿ. ಗ್ಯಾರೇಜ್‌ನಲ್ಲಿ ಸರ್ಕಾರಿ ವಾಹನಗಳ ನಾಲ್ಕು ಟೈರು ಟ್ಯೂಬುಗಳನ್ನು ಬದಲಾಯಿಸಲು ತಗಲುವ ವೆಚ್ಚವೆಷ್ಟು? ಖಾಸಗೀಯಾಗಿ ಮಾಡಿಸಿದರೆ ತಗಲುವ ವೆಚ್ಚವೆಷ್ಟು?

ಇ) ಕರ್ನಾಟಕ ರಾಜ್ಯ ರಸ್ತೆ ವಾಹನದಲ್ಲಿ ಪ್ರಯಾಣ ಮಾಡುವ ಪ್ರಯಾಣಿಕರಿಗೆ (ದೂರ-ಪ್ರಯಾಣ) ಅವರು ಪಡೆಯುವ ಟಿಕೇಟಿನ ಆಧಾರದ ಮೇಲೆ ಜೀವವಿಮೆ ಮಾಡಿಸಲು ಸರ್ಕಾರದವರು ಕ್ರಮಕೈಗೊಳ್ಳುವರೇ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಮಂತ್ರಿಗಳು).—

ಅ) ರಾಷ್ಟ್ರೀಯ ಹೆದ್ದಾರಿಗಳೇ ಅಲ್ಲದೆ ರಾಜ್ಯ ಹೆದ್ದಾರಿಗಳೂ ಇತರೆ ಅಪಘಾತ ಸರಣ ಎಂದು ಘೋಷಿಸಲಾದ ಶಾಲಾ ಆವರಣ, ಲೆವೆಲ್ ಕ್ರಾಸಿಂಗ್ ಮತ್ತು ಇತರೆ ರಸ್ತೆಗಳಲ್ಲಿ ಅಪಘಾತಗಳನ್ನು ತಡೆಯುವ ಉದ್ದೇಶದಿಂದ ವಾಹನಗಳ ವೇಗವನ್ನು ಮಿತಿಗೊಳಿಸಲು ದಿಬ್ಬಗಳನ್ನು ರಚಿಸಿರುತ್ತಾರೆ. ಇದ್ದರಿಂದ ವಾಹನಗಳು ನಿಂತು ನಿಧಾನವಾಗಿ ಚಲಿಸುವುದರಿಂದ ಇಂಧನ ವ್ಯಯ ಸ್ವಲ್ಪ ಮಟ್ಟಿಗೆ ಹೆಚ್ಚುವುದು. ಆದರೆ ಇದು ಅತಿ ಅಲ್ಪ ಪ್ರಮಾಣದ್ದು ಮತ್ತು ನಿರ್ಲಕ್ಷಿಸಬಹುದಾದುದು ಆಗಿರುತ್ತದೆ.

ಈ ಒಂದು ನಿಬಂಧನೆ ಎಲ್ಲಾ ಸಾರ್ವಜನಿಕ ಹಾಗೂ ಖಾಸಗೀ ವಾಹನಗಳಿಗೂ ಅನ್ವಯಿಸುವ ಪ್ರಯುಕ್ತ. ಇದಕ್ಕೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ಸುಗಳು ಹೊರತಾಗಿಲ್ಲ ಮತ್ತು ಹೆಚ್ಚಿನ ವೆಚ್ಚ ಭರಿಸುವುದು ಅನಿವಾರ್ಯ.

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಗ್ಯಾರೇಜ್‌ನಲ್ಲಿ ಟೈರು, ಟ್ಯೂಬುಗಳನ್ನು ಬದಲಾಯಿಸುವ ಕೆಲಸ ನಿರ್ವಹಣೆಯ ಅಂಗವಾಗಿ ತನ್ನದೇ ಆದ ಕಾರ್ಯಾಗಾರದಲ್ಲಿ ಅದಕ್ಕಾಗಿ ನೇಮಿಸಲ್ಪಟ್ಟ ಸಿಬ್ಬಂದಿಯಿಂದ ಕೈಗೊಳಾಗುತ್ತಿದೆ.

ಟೈರು ಟ್ಯೂಬುಗಳನ್ನು ಬದಲಾಯಿಸಲು ಪ್ರತಿ ವಾಹನಕ್ಕೆ ತಗಲುವ ವೆಚ್ಚ ಈ ಕೆಳಕಂಡಂತಿದೆ,—

	ರೂ.	ಪೈಸೆ
ಮುಂಭಾಗದ ಹೊಸ ಟ್ಯೂಬು ಮತ್ತು ಫ್ಲಾಪ್ ಸಹಿತ ೨ ಟೈರುಗಳ ವೆಚ್ಚ.	೪೭೨೨	೦೦
ಮುಂಭಾಗದ ಹೊಸ ಟ್ಯೂಬ್ ಮತ್ತು ಫ್ಲಾಪ್ ಸಹಿತ ೨ ಟೈರುಗಳ ವೆಚ್ಚ ಹಿಂಬದಿ ಚಕ್ರಗಳ ನಾಲ್ಕು ಸಂಸ್ಕರಿಸಿದ ಟೈರುಗಳ ಬೆಲೆ	೨೦೫೧	೦೦
ಒಬ್ಬ ಮೆಕ್ಯಾನಿಕ್, ಒಬ್ಬ ಸಹಾಯಕ ಇವರುಗಳಿಗೆ ಟೈರುಗಳನ್ನು ಸಿದ್ಧಪಡಿಸಿ ಜೋಡಿಸಲು ಬಂದು ಘಂಟೆಯ ಮಂಜೂರಿ.	೧೦	೫೦
ಮೊತ್ತ	೧೦೮೩೩	೫೦

ಟೈರುಗಳು ಹಾಗೂ ಟ್ಯೂಬುಗಳನ್ನು ಬದಲಾಯಿಸುವ ಕೆಲಸ ಸಂಸ್ಥೆಯ ಕಾರ್ಯಾಗಾರದಲ್ಲಿಯೇ ಅದಕ್ಕಾಗಿ ನೇಮಿಸಲ್ಪಟ್ಟ ಸಿಬ್ಬಂದಿಯಿಂದ ಕೈಗೊಳ್ಳಲಾಗುತ್ತಿದೆಯಾದ ಕಾರಣ, ಖಾಸಗಿಯವರು ತೆಗೆದುಕೊಳ್ಳುವ ಬೆಲೆ ನಮ್ಮಲ್ಲಿ ಸಿಗುವುದಿಲ್ಲ.

೩) ಸಧ್ಯದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಆ ರೀತಿಯ ಪ್ರಸ್ತಾವನೆ ಇರುವುದಿಲ್ಲ. ಆದರೂ ನಿಯಮಾವಳಿಯ ರೀತ್ಯ ಪರಿಹಾರಧನವನ್ನು ಎಲ್ಲಾ ಪ್ರಕರಣಗಳಲ್ಲಿಯೂ ಸಹ ನೀಡಲಾಗುತ್ತಿದೆ.

ಶ್ರೀ ಐ. ಬಿ. ಶಂಕರ್.—ಮಾನ್ಯ ಅಧ್ಯಕ್ಷರೇ, ನಾನು ಪ್ರಶ್ನೆ ಕೇಳಿದ ಮೂಲ ಉದ್ದೇಶ ಎಂದರೆ ನಾನು ಹೆಚ್ಚಾಗಿ ಕೆ.ಎಸ್.ಆರ್.ಟಿ.ಸಿ. ಬಸ್‌ಗಳಲ್ಲಿಯೇ ಪ್ರಯಾಣವನ್ನು ಮಾಡುತ್ತಿರುತ್ತೇನೆ. ಬಸ್‌ಗಳನ್ನು ನಡೆಸುತ್ತಿರುವ ಚಾಲಕರು ರಸ್ತೆ ಉಬ್ಬುಗಳು ಬಂದಾಗ ಬ್ರೇಕ್ ಹಾಕಿ ನಂತರ ಮುಂದೆ ಹೋಗುತ್ತಿರುವ ಸಂದರ್ಭಗಳನ್ನು ನನ್ನ ಅನುಭವದಲ್ಲಿ ನೋಡಿಲ್ಲ ಮತ್ತು ಅದು ನನ್ನ ಗಮನಕ್ಕೆ ಬಂದಿಲ್ಲ. ಅಂದರೆ ಡ್ರೈವರ್‌ಗಳು ಉಬ್ಬುಗಳನ್ನು ಅದೇ ವೇಗದಲ್ಲಿ ದಾಟುವ ಕಾರಣ ಬಸ್‌ಗಳಿಗೆ ಜಖಂ ಆಗುತ್ತದೆ ಮತ್ತು ಅದರ ಭಾಗಗಳಿಗೂ ಜಖಂ ಆಗುವುದಲ್ಲದೆ ಪ್ರಯಾಣಿಕರಿಗೂ ತೊಂದರೆಯಾಗುತ್ತಿದೆ. ಆದುದರಿಂದ ಈ ಉಬ್ಬುಗಳನ್ನು ತೆಗೆಯಿಸುವ ಬಗ್ಗೆ ಮತ್ತು ಅದರಿಂದಾಗುವ ಇತರ ಅನಾನುಕೂಲತೆಗಳನ್ನು ನಿವಾರಿಸುವ ಬಗ್ಗೆ ಮಾನ್ಯ ಸಚಿವರು ಕ್ರಮ ಕೈಗೊಳ್ಳುತ್ತಾರೆಯೇ ?

ಎರಡನೆಯದಾಗಿ, ಟೈರ್‌ಗಳನ್ನು ಸಿದ್ಧಪಡಿಸಿ ಜೋಡಿಸಲು ಒಂದು ಗಂಟೆಯ ಅವಧಿಗೆ ೧೦ ರೂಪಾಯಿ ೫೦ ಪೈಸೆಗಳನ್ನು ನಿಗದಿ ಮಾಡಿದ್ದೇವೆ ಎಂದು ಹೇಳಿದ್ದಾರೆ. ಅದು ಉತ್ತಮವಾದುದು. ಆದರೆ ಒಬ್ಬ ಮ್ಯಾಕಾನಿಕ್ ಮತ್ತು ಒಬ್ಬ ಸಹಾಯಕರಿಗೆ ವರ್ಕ್‌ಲೋಡ್ ಎಷ್ಟು ಎಂದು ನಿಗದಿ ಪಡಿಸಿದ್ದೀರಾ ಮತ್ತು ಅವರು ಎಷ್ಟು ಗಂಟೆಗಳ ಕಾಲ ಈ ಕಾರ್ಯ ನಿರ್ವಹಿಸಲು ಅವಕಾಶವನ್ನು ಕೊಟ್ಟಿದ್ದೀರಾ ? ಅಂತೆಯೇ ರಸ್ತೆಯ ಅಪಘಾತಗಳಿಗೆ ಇನ್‌ಷೂರೆನ್ಸ್ ಪದ್ಧತಿಯನ್ನು ಅಳವಡಿಸಬೇಕೆಂದು ನಾನು ಸಲಹೆಯನ್ನು ಕೊಟ್ಟಿದ್ದಕ್ಕೆ ಮಾನ್ಯ ಸಚಿವರು ಉತ್ತರವಾಗಿ ಒಂದು ಕಾಗದವನ್ನು ಬರೆದು ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಡೆಸಿದ ಕಾರ್ಯಕ್ರಮಗಳನ್ನು ತಿಳಿಸಿದ್ದಾರೆ. ಆದರೆ ಮಾನ್ಯ ಸಚಿವರು ಹೀಗೆ ಅಪಘಾತಕ್ಕೆ ಒಳಗಾದವರಿಗೆ ಸಹಾಯ ಧನವನ್ನು ನೀಡುತ್ತಿದ್ದೇವೆ ಎಂದು ಹೇಳಿದ್ದಾರೆ. ನೀವು ಟಿಕೆಟ್ ಬೆಲೆಯನ್ನು ಜಾಸ್ತಿ ಮಾಡಿದರೂ ಪರವಾಗಿಲ್ಲ, ಇದು ಉತ್ತಮ ಸಲಹೆಯಾಗಿರುವುದರಿಂದ ಅಪಘಾತಗಳಲ್ಲಿ ಪ್ರಾಣ ಕಳೆದುಕೊಂಡವನಿಗೆ ಅನುಕೂಲ ಆಗುವುದಕ್ಕೋಸ್ಕರ ಇದನ್ನು ನಿಮಿಕೆ ಜಾರಿಗೆ ತರಬಾರದು ಸ್ವಾಮಿ ?

ಶ್ರೀ ಪಿ. ಜಿ. ಆರ್. ಸಿಂಧ್ಯ —ಪ್ರಯಾಣಿಕರ ಮೇಲೆ ಇನ್‌ಷೂರ್ ಮಾಡುವುದರ ಬಗ್ಗೆ ಅವರು ಕೊಟ್ಟಿರುವ ಸಲಹೆಯನ್ನು ಪರಿಶೀಲಿಸಲು ಸಾರಿಗೆ ಸಂಸ್ಥೆಯ ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇನೆ. ಅದನ್ನು ಅವರು ನೋಡುತ್ತಿದ್ದಾರೆ. ಮತ್ತೆ, ರಸ್ತೆಯಲ್ಲಿರುವ ಸ್ಪೀಡ್ ಬ್ರೇಕರ್‌ಸನ್ನು ತೆಗೆದುಹಾಕುವುದಕ್ಕೆ ಆಗುವುದಿಲ್ಲ, ಆ ರೀತಿ ಮಾಡಿದರೆ ಆಕ್ಸಿಡೆಂಟ್‌ಗಳು ಹೆಚ್ಚಾಗುತ್ತವೆ. ಕೆಲವು ಕಡೆ ಹಳ್ಳಿಗಳಲ್ಲಿ ಜನಗಳೇ ಸ್ವಯಂ ಸ್ಪೀಡ್ ಬ್ರೇಕರ್‌ನನ್ನು ಹಾಕಿಕೊಂಡಿರುವುದು ತಮಗೂ ಗೊತ್ತಿರಬಹುದು. ಆದ್ದರಿಂದ ರೋಡ್ ಸೇಫ್‌ಟಿ ದೃಷ್ಟಿಯಿಂದ ಇವು ಅವಶ್ಯಕವಾಗಿದೆ.

ಶ್ರೀ ಐ. ಬಿ. ಶಂಕರ್,—ಸ್ವಾಮಿ, ಕೆ. ಎಸ್.ಆರ್.ಟಿ.ಸಿ. ಖಾತೆಯನ್ನು ನಿಮಗೆ ಕೊಟ್ಟ ಮೇಲೆ ಉತ್ತಮವಾಗಿ ಕೆಲಸ ನಿರ್ವಹಿಸುತ್ತಿದ್ದೀರಿ, ಆದರೆ ಕಳೆದ ಮೂರು ತಿಂಗಳಿಂದ ಈಚೆಗೆ ಬಸ್ಸುಗಳು ವೇಳಾಪಟ್ಟಿಯಂತೆ ಓಡುತ್ತಿಲ್ಲ. ೫ ಗಂಟೆಗೆ ಹೋಗುವ ಬಸ್ ೬ ಗಂಟೆಗೆ ಹೋಗುತ್ತಿವೆ. ದಯವಿಟ್ಟು ಇದನ್ನು ಪರಿಪಡಿಸಬೇಕು. ಹಿಂದೆ ಏನು ಆಸಕ್ತಿ ವಹಿಸುತ್ತಿದ್ದಿರೋ ಅದೇನಾದರೂ ಈಗ ಕಡಿಮೆ ಆಗಿದೆಯೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಹಾಗೇನೂ ಇಲ್ಲ. ಎಲ್ಲಾ ಬಸ್ಸ್‌ಗಳನ್ನೂ ಸಮರ್ಪಕವಾಗಿ ಓಡಿಸುವಂತೆ ಸಾರಿಗೆ ಸಂಸ್ಥೆಯವರಿಗೆ ಆದೇಶ ಕೊಡುತ್ತೇನೆ.